ಈ ವಿಷಯದಲ್ಲಿ ಆತ್ಮವಿಶ್ವಾಸವಿಲ್ಲ. ಯಾವ 'ಪ್ರಪಂಚ' ನಮಗೆ ತಿಳಿದಿಲ್ಲವೋ ಅದರೊಳಗೆ ಪಾದಸ್ಪರ್ಶ ಮಾಡದಿರುವುದೇ ಒಳ್ಳೆಯದು. ಕಳೆದ ಅನೇಕ ವರ್ಷಗಳಿಂದ ಕಥೆ, ಕಾದಂಬರಿ, ಮಕ್ಕಳ ಸಾಹಿತ್ಯವೇ ನನ್ನ ಪ್ರಪಂಚವಾಗಿಬಿಟ್ಟಿದೆ.

**◆ ಇಷ್ಟೊಂದು ಜನಪ್ರಿಯ ಹಾಗೂ ಪ್ರಬುದ್ಧ ಲೇಖಕರಾಗಿರುವ ನೀವು ಇನ್ನೂ ನಿಮ್ಮ ಆತ್ಮಚರಿತ್ರೆ ಬರೆಯುವುದಕ್ಕೆ ಮನಸ್ಸು ಮಾಡಿಲ್ಲ ಏಕೆ?**

ನನ್ನಂತಹ ಎಲ್ಲರೂ ಆತ್ಮಚರಿತ್ರೆ ಬರೆಯುವುದಕ್ಕೆ ಮುಂದಾದರೆ ಈ 'ಪ್ರಕಾರ'ಕ್ಕೆ ಇರುವ ಗೌರವವೇ ಹೊರಟುಹೋಗುವುದಿಲ್ಲವೇ ಎನ್ನುವ ಪ್ರಶ್ನೆ ನನ್ನನ್ನು ಸದಾ ಕಾಡುತ್ತದೆ. ನನ್ನನ್ನು ನಾನು ಹೊಗಳಿಕೊಳ್ಳುತ್ತ ಹೋಗುವುದರಲ್ಲಿ ಯಾವ ಅರ್ಥವಿದೆ ಮತ್ತು ಸಾರ್ಥಕತೆ ಇದೆ? ನಾನು ಹಲವರ ಆತ್ಮಕಥೆ ಓದಿದ್ದೇನೆ. ನನ್ನ ಸಹೋದ್ಯೋಗಿಗಳು, ಸ್ನೇಹಿತರು ಕೂಡ ಆತ್ಮಚರಿತ್ರೆ ಬರೆದುಕೊಂಡಿದ್ದಾರೆ. ಆದರೆ ಅದರಲ್ಲಿ ಅವರು ಜೀವನದಲ್ಲಿ ಪಟ್ಟಿರುವ ಕಷ್ಟಗಳು, ನಡೆದುಬಂದ ದಾರಿ, ಇತ್ಯಾದಿಗಳು ಮಾತ್ರ ತುಂಬಿಕೊಂಡಿವೆ. ಅವರು ಮಾಡಿದ ತಪ್ಪುಗಳು, ಅವರ ದುಶ್ಚಟಗಳು, ಅವ್ಯವಹಾರಗಳು ಇತ್ಯಾದಿ ಯಾವುದರ ಬಗ್ಗೆಯೂ ಅದರಲ್ಲಿ ಉಲ್ಲೇಖವೇ ಇಲ್ಲ. ಹಾಗಿದ್ದರೆ, ತಾನೊಬ್ಬ ಮಹಾನ್ ಸಾಧಕ ಎಂದು ಬಿಂಬಿಸಿಕೊಳ್ಳುವುದಷ್ಟೇ ಆತ್ಮಚರಿತ್ರೆ ಬರೆಯುವುದರ ಉದ್ದೇಶವೇನು? ಪ್ರತಿಯೊಬ್ಬ ಜಾಡಮಾಲಿ, ದರ್ಜಿ, ವಾಹನ ಚಾಲಕ, ಗುಮಾಸ್ತ, ಅಧಿಕಾರಿ, ರಾಜಕಾರಣಿ, ಮಠಾಧೀಶ... ಹೀಗೆ ಸಮಾಜದ ಎಲ್ಲಾ ಸ್ತರಗಳಲ್ಲಿ ಜೀವನ ನಡೆಸುತ್ತಿರುವವರೂ ಬದುಕಿನಲ್ಲಿ ಮೇಲೇರುವುದಕ್ಕಾಗಿ ಸಾಕಷ್ಟು ಕಷ್ಟಪಟ್ಟಿರುತ್ತಾರೆ. ಪ್ರತಿಯೊಬ್ಬರೂ ಆತ್ಮಚರಿತ್ರೆ ಬರೆಯುವುದಕ್ಕೆ ಯೋಗ್ಯರು ಎಂದು ಪರಿಗಣಿಸಬಹುದೇನು? ಅವರೆಲ್ಲಾ ಆತ್ಮಚರಿತ್ರೆ ಬರೆದುಕೊಳ್ಳುವುದಕ್ಕೆ ಯೋಗ್ಯರಲ್ಲ ಎನ್ನುವುದಾದರೆ, ಯಾವ ಕಾರಣದಿಂದ ನಿರಾಕರಿಸುವುದು? ಆತ್ಮಚರಿತ್ರೆ ಬರೆದುಕೊಳ್ಳುವುದಕ್ಕೆ ಇರಬೇಕಾದ ಅರ್ಹತೆಗಳೇನು ಮತ್ತು ಏರಬೇಕಾದ ಎತ್ತರವೆಷ್ಟು? ಕೇವಲ ತನ್ನನ್ನು ತಾನು 'ಪ್ರಭಾವಶಾಲಿ' ಎಂದು ಬಿಂಬಿಸಿಕೊಳ್ಳುವುದೇ ಆತ್ಮಚರಿತ್ರೆಯ ಉದ್ದೇಶವೇನು? ತಾನು ಮಾಡಿದ ತಪ್ಪುಗಳನ್ನು ಮುಚ್ಚಿಟ್ಟು ಆತ್ಮಚರಿತ್ರೆ ಬರೆದುಕೊಂಡರೆ, ಅದು ಲೇಖಕರು ತಮ್ಮ ಆತ್ಮಕ್ಕೆ ತಾವೇ ಮಾಡಿಕೊಳ್ಳುವ ವಂಚನೆ ಆಗುವುದಿಲ್ಲವೇ? ಇಂತಹ ಹತ್ತು ಹಲವಾರು ಪ್ರಶ್ನೆಗಳಿಗೆ ಸರಿಯಾದ ಉತ್ತರ ಸಿಗದ ಕಾರಣದಿಂದಾಗಿ ನಾನು ಆತ್ಮಚರಿತ್ರೆ ಬರೆಯುವ ಸಾಹಸಕ್ಕೆ ಇನ್ನೂ ಮುಂದಾಗಿಲ್ಲ.

**◆ ಬಹುತೇಕ ಪ್ರಾದೇಶಿಕ ಭಾಷೆಗಳಲ್ಲಿ ಓದುಗರ ಸಂಖ್ಯೆ ಕಡಿಮೆಯಾಗುತ್ತಿದೆ ಎನ್ನುವ ಕೂಗು ಕೇಳಿಬರುತ್ತಿದೆ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆಯೇನು?**

ಖಂಡಿತ... ಬಂಗಾಳಿಯೂ ಸೇರಿದಂತೆ ಭಾರತದ ಬಹುತೇಕ ಭಾಷೆಗಳು ಓದುಗರ ಸಮಸ್ಯೆಯನ್ನು ಎದುರಿಸುತ್ತಿವೆ. ಕೇವಲ ಓದುಗರು ಮಾತ್ರವಲ್ಲ, ಕೆಲವು ಭಾಷೆಗಳು ಮುಂದಿನ ಕೆಲವು ವರ್ಷಗಳಲ್ಲಿ ತಮ್ಮ ಅಸ್ತಿತ್ವದ ಬಗ್ಗೆಯೂ ಯೋಚಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಬಹುದು. ಏಕೆಂದರೆ ತಮ್ಮ ಮಾತೃಭಾಷೆಯಲ್ಲಿ ಮಾತನಾಡುವವರ ಸಂಖ್ಯೆಯೂ ಕಡಿಮೆಯಾಗುತ್ತಿದೆ. ಇದರ ಬಗ್ಗೆ ಯಾರನ್ನೇ ಪ್ರಶ್ನಿಸಿದರೂ, 'ಏನೂ ಮಾಡಲಾಗದು; ಇದು ಇಂದಿನ ಜನರೇಷನ್' ಎಂದುಬಿಡುತ್ತಾರೆ. ಹಾಗಿದ್ದರೆ ಈ ಸಮಸ್ಯೆಗೆ ಹೊಣೆ ಯಾರು? ನಾವೇ ಅಲ್ಲವೇ? ಈ ಸಮಸ್ಯೆಗೆ ಬೇರೆಯವರನ್ನು ಹೊಣೆಯಾಗಿಸುವುದು ಸರಿಯಲ್ಲ. ನಮ್ಮ ಮಕ್ಕಳು ಇಂಗ್ಲಿಷ್ ಭಾಷೆಯನ್ನು ಕಲಿತು, ಅದರಲ್ಲಿಯೇ ವ್ಯವಹರಿಸುವುದನ್ನು ನೋಡಿ ನಾವು ಹೆಮ್ಮೆಪಡುವುದನ್ನು ಆರಂಭಿಸಿದ ದಿನದಿಂದಲೇ ಮಾತೃಭಾಷೆಯ ಅವನತಿ ಆರಂಭವಾಯಿತೆಂದು ಅರ್ಥ. ಬ್ರಿಟಿಷರು ಭಾರತಕ್ಕೆ ಬಂದಾಗ ಇಲ್ಲಿನ ಪ್ರಾದೇಶಿಕ ಭಾಷೆಯನ್ನು ಕಲಿಯುವುದಕ್ಕೆ ಮುಂದಾಗಲಿಲ್ಲ. ಏಕೆಂದರೆ ಅವರಿಗೆ ಅದು ಕಷ್ಟವಾಗಿತ್ತು. ಇಲ್ಲಿಯವರೊಂದಿಗೆ ವ್ಯವಹರಿಸುವುದಕ್ಕೆ ಅವರಿಗೆ ಒಂದು ಭಾಷೆ ಬೇಕಾಗಿತ್ತಲ್ಲವೇ? ಹಾಗಾಗಿ ಅವರು ಭಾರತೀಯರಿಗೇ ತಮ್ಮ ಭಾಷೆಯನ್ನು ಕಲಿಸಿದರು; ತಮ್ಮ ಭಾಷೆಯೇ ಶ್ರೇಷ್ಠ ಎನ್ನುವ ಭಾವನೆಯನ್ನು ಮೂಡಿಸಿದರು. ನಾವು ಅವರ ಭಾಷೆಯನ್ನು ಕಲಿತೆವು; ಪ್ರೇಮಿಸತೊಡಗಿದೆವು. ಇಂಗ್ಲಿಷ್ ಕಲಿಯುವುದನ್ನು ಮತ್ತು ಆ ಭಾಷೆಯಲ್ಲಿ ಮಾತನಾಡುವುದನ್ನು ನಾವೀಗ 'ಪ್ರತಿಷ್ಠೆ' ಎಂದುಕೊಳ್ಳುತ್ತಿದ್ದೇವೆ. ಇಂಗ್ಲಿಷ್ ಕಲಿಯದಿದ್ದರೆ ಉದ್ಯೋಗ ಸಿಗಲಾರದು ಅಥವಾ